Regd No M 1299 Sri ಶಾ 18—10—51

SATYAVADI = 35th Year

ಸತ್ಯವಾದಿ

ಸಂಪಾದಕರು- ಆರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಕಾಂಗ್ರೆಸ್ ಚಪ್ಪರ ಬೆಂಕಿ ಬಿದ್ದು ಭಸ್ಮವಾಯಿತು

ಮೈಸೂರು ರೇಸೆಸ್

ನಿನ್ನೆಯ ಫಲಿತಾಂಶ

1 ನಂದಿ ಪ್ಲೇಟ್

ಆರೆಕಲ್, ಬ್ಲಾಕ್‌ವುಡ್, ರಸೇಂದ್ರ ಟೋಟು — ವಿಕ್ ರೂ 77ವರೆ. ಪ್ಲೇಸ್ ರೂ 19, 13, 16

2 ಪ್ಯಾಲೇಸ್ ಪ್ಲೇಟ್ (ಡಿ 2)

ಮಾಟ್ಲಿಕ್, ಫೈಕ್ ಫ್ಲವರ್, ವೆರಿಕ್ ಟೋಟು— ವಿಕ್ ರೂ. 18 ವರೆ. ಪ್ಲೇಸ್ ರೂ 8 9, 16 ವರೆ.

3 ಪ್ಯಾಲೇಸ್ ಪ್ಲೇಟ್ (ಡಿ 1)

ಲೇಡಿ ಕ್ಲಿಯೋಪಾತ್ರ, ವಿಂಡ್ಸರ್ ಲಾಸ್

ಟೋಟು:— ವಿಕ್ ರೂ 13, ಪ್ಲೇಸ್ ರೂ 8, 10

4 ಲಲಿತ ಮಹಲ್ ಪ್ಲೇಟ್

ಎಲ್ಲವೆಂಕೊ, ಜಾರ್ಜಿಯ.

ಟೋಟು— ಪ್ಲೇಸ್ ರೂ 5 ವರೆ, 7

5 ಕಾರಂಜಿ ಪ್ಲೇಟ್

ಕೋಲ್ಡ್ ಷೌಲ್ಡರ್, ಉಕೆಲೆಲೆ, ಸರ್ಕರಿ

ಟೋಟು— ವಿಕ್ ರೂ 21, ಪ್ಲೇಸ್ ರೂ 6 ವರೆ, 6, 7.

6 ಗ್ಯಾಂಜಿಸ್ ಪ್ಲೇಟ್

ಡಾಲಿ, ಜಾದೂಗಾರ್, ದೇವ ಕುಮಾರ್

ಟೋಟು— ವಿಕ್ ರೂ 16, ಪ್ಲೇಸ್ ರೂ 6, 6, 6

ಟ್ರಿಬಲ್ ಈವೆಂಟು ರೂ 383 ನ್ನು 31 ಟಿಕೀಟುಗಳಿಗೆ ಹಂಚಲಾಯಿತು

ನೂತನ ಗವರ್ನರ ನೇಮಕ

ಇಂತಿಷ್ಟರಲ್ಲೇ ಪಾಕೀಸ್ತಾನದಲ್ಲಿ ನೂತನ ಗವರ್ನರ್ ಜನರಲ್‌ರ ನೇಮಕವಾಗಲಿದೆ.

ಅವರಿಗೆ ಮರಣ ಮುನ್ನ ತಿಳಿದಿತ್ತೇ ?

ಲಿಯಾಕತ್ ಅಲಿಯವರು ಸತ್ಕ ದಿನ ಬೆಳಿಗ್ಗೆ, ಅವರು ಕರಾಚಿಯ ತಮ್ಮ ಗೃಹದಲ್ಲಿ ಇನ್ನೂ ರಾತ್ರಿ 3 ಗಂಟೆ ವೇಳೆಗೆ ಎದ್ದು ಮನೆಯ ಎಲ್ಲ ಕೋಣೆಗಳನ್ನೂ ನೋಡಿದರೆಂದೂ, ರಾವಲ್ಪಿಂಡಿಗೆ ತೆರಳುವಾಗ ಗುಡ್‌ಬೈ ಎಂದರೆಂದು ಕರಾಚಿ ಡಾನ್ ಪ್ರಕಟಿಸಿದೆ

ಬೆಂಕಿ ಅನಾಹುತ

ನಿನ್ನೆ ದಿವಸ ಬೆಳಿಗ್ಗೆ ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿ ಸೇರಿದ್ದ ಕಾಂಗ್ರೆಸ್ ಚಪ್ಪರ ನಿನ್ನೆ ದಿವಸ ಸಂಜೆ ಕೇವಲ 20 ನಿಮಿಷಗಳಲ್ಲಿ, ವಿದ್ಯುತ್ ಪ್ರವಾಹದಿಂದ ಬೆಂದುಬೂದಿಯಾಯಿತು 20 ಸಹಸ್ರ ಮಂದಿ ಮಂಡಿಸಲು ಅನುಕೂಲವಿದ್ದ ಈ ಚಪ್ಪರದಲ್ಲಿ ಇಂದು ಭಾರತ ಕಾಂಗ್ರೆಸಿನ ಬಹಿರಂಗ ಅಧಿವೇಶನ ಸಮಾವೇಶವಾಗಬೇಕಿತ್ತು,

ರೂ 2 ಲಕ್ಷ ನಷ್ಟ ಅಂದಾಜಾಗಿದೆ

ರಾಜರಿಂದ ಅಂಗೀಕಾರ

ಪ್ರಧಾನ ಪದವಿಯನ್ನು ಸ್ವೀಕರಿಸಿದ ಕ್ವಾಜಾ ನಾಜಿಮುದ್ದೀನರು ಪಾಕಿಸ್ತಾನ ಗವರ್ನರ ಜನರಲ್ ಪದವಿಗೆ ಕೊಟ್ಟ ರಾಜೀನಾಮೆಯನ್ನು ಬ್ರಿಟೀಷ ರಾಜರು ಅಂಗೀಕರಿಸಿರುವರೆಂದು ಲಂಡನ್ ವರದಿ

ಗುಲಾಂ ಮಹದ್ ನೇಮಕ

ಕ್ವಾಜಾ ನಾಜಿಮುದ್ದೀನರ ಸ್ಥಳದಲ್ಲಿ ಪಾಕ್ ಗವರ್ನರ ಜನರಲ್ಲರನ್ನಾಗಿ ಆರ್ಥಿಕ ಸಚಿವ ಗುಲಾಂ ಮಹಮದರನ್ನ ಬ್ರಿಟೀಷ ರಾಜರು ನೇಮಿಸಿದ್ದಾರೆ

ಬೊಂಬಾಯಿನಲ್ಲಿ ರೈಲು ಅನಾಹುತ

ನಿನ್ನೆ ಬೊಂಬಾಯಿನಲ್ಲಿ ರೈಲಿಗೆ ಸಿಕ್ಕಿ 5 ಹೆಂಗಸರೂ 3 ಗಂಡಸರೂ ಸತ್ಕರು 5 ಮಂದಿ ತೀವ್ರ ಗಾಯಗೊಂಡರು

ಕೊಲೆ ಪ್ರಚೋದನೆ ?

ಲಿಯಾಕತ್‌ರನ್ನು ಕೊಂದ ಸಯ್ಯದ ಅಕ್ಬರನ ಬಳಿ ಅಷ್ಟು ಹಣ ಸಿಕ್ಕಿದ್ದೂ, ಅವನು ಇಳಿದಿದ್ದ ಮನೆಯಲ್ಲಿ ಇನ್ನೂ ಹತ್ತು ಸಾವಿರ ರೂ ದೊರೆತಿದ್ದೂ ಅವನು ಕೊಲೆ ಮಾಡಲು ಪ್ರಚೋದಿಸಲ್ಪಟ್ಟಿರಬಹುದೆಂದು ಕರಾಚಿ ವರದಿ

× ನಿನ್ನೆ ದಿವಸ ಸಂಜೆ ದೆಹಲಿಯ ರಾಮಲೀಲಾ ಮೈದಾನದಲ್ಲಿ ರಾಜಾಜಿಯವರ ಅಧ್ಯಕ್ಷತೆಯಲ್ಲಿ ಲಿಯಾಕತರವರ ನಿಧನ ಬಗೆಗೆ ಸಂತಾಪ ಸೂಚಕ ಸಭೆ ಏರ್ಪಾಟಾಗಿತ್ತು. ಡಾ|| ರಾಜೇಂದ್ರ ಪ್ರಸಾದರು ಪಂ| ನೆಹರು ಭಾಷಣಮಾಡಿದರು

ನೆಹರು ಹಾರೈಕೆ

ಪಾಕ್ ಮತ್ತು ನಮ್ಮ ಜಾಂಧ್ಯ ಈಗ ಸರಿಯಾಗಿಲ್ಲ ಆದರೂ ಕೂಡ ನಾವು ಸಂಧಾನ ಮಾರ್ಗ ತ್ಯಜಿಸದಿರಬೇಕು ಈ ದುರಂತ ಪ್ರಸಂಗ ಪಾಕ್ ಭಾರತ ವಿಷಮ್ಯಾಪ ಪರಿಹಾರವನ್ನು ಎರಡು ರಾಷ್ಟ್ರಗಳಲ್ಲಿ ಮಿತ್ರತ್ವವನ್ನು ಕಾಪಾಡುವಂತಾಗಲಿ ಎಂದು ದೆಹಲಿಯಲ್ಲಿ ಸಮಾವೇಶವಾಗಿದ್ದ ಕಾಂಗ್ರೆಸಿನ ವಿಷಯ ನಿಯಾಮಕ ಸಮಿತಿಯಲ್ಲಿ ಪಂ|| ನೆಹರು ತಿಳಿಸಿದ್ದಾರೆ.

ಇವರಿಗೆ ಪ್ರಧಾನ ಪಟ್ಟ

ಪಾಕ್ ಪಂಜಾಬ್ ಗವರ್ನರ್ ಅಬ್ದುಲ್ ರಬ್ ನಿಷ್ತಾರ್ ಪಾಕ್ ಪ್ರಧಾನರಾಗಬಹುದು.

ನೆಹರು ನೀತಿಗೆ ಒಪ್ಪಿಗೆ

ನವದೆಹಲಿಯಲ್ಲಿ ಸಮಾವೇಶವಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಲಿ ಭಾರತ ಸರ್ಕಾರದ ವಿದೇಶಾಂಗ ಕ್ರಮಕ್ಕೆ ಅನುಮತಿಯನ್ನು ಕೊಡುವ ನಿರ್ಣಯವನ್ನಿಟ್ಟಿದ್ದನ್ನು ವಿಷಯ ನಿಯಾಮಕ ಸಮಿತಿ ಒಪ್ಪಿಗೆ ಕೊಟ್ಟಿತು.

ಅನ್ನ ತ್ಯಜಿಸುತ್ತಾರೆ

ಸ್ವಾಮಿ ನೀತಾನಂದರವರ ಶಿಷ್ಯ ಶ್ರೀ ಗೋಪಾಲರಾವ್ ಎಂಬವರು ವಿಜಯವಾಡಾದಲ್ಲಿ ಹೇಳಿಕೆಯಿತ್ತು ಮುಂದಿನ ಮಾಹೆ 11 ರೊಳಗೆ ಆಂಧ್ರಪ್ರಾಂತಕ್ಕೆ ಕ್ರಮವಹಿಸಗದಿದ್ದಲ್ಲಿ ಉಪವಾಸವಿರುವುದಾಗಿ ತಿಳಿಸಿದ್ದಾರೆ. ಈ [illegible] ಆಂಧ್ರದ ಎಲ್ಲ ಜಿಲ್ಲೆಗಳಲ್ಲೂ ಗುಂಪ್ರಗಳ ರಚನೆ ಜರುಗಿದೆ ಎಂದು ಇವರ ಹೇಳಿಕೆ

ಸಂತಾಪ

[illegible] ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್ ಪಂ| ನೆಹರು ಮುಂತಾಗಿ [illegible] ಲಿಯಾಕತ್‌ರವರ ಮರಣಕ್ಕೆ ಸಂತಾಪ ಸೂಚಿಸಿದ್ದಾರೆ.

ಸಚಿವರಿಂದ ಖಂಡನೆ

ಮೈಸೂರು ಹಂಗಾಮಿ ಮುಖ್ಯಮಂತ್ರಿ ಸಚಿವ ಶ್ರೀ ದಾಸಪ್ಪನವರು ಲಿಯಾಕತ್ ಅಲಿ ಖಾನ್ ಮುಂತಾಗಿ ಅನುತಾಪ ವ್ಯಕ್ತ ಮಾಡಿ ಹತ್ಯೆಯನ್ನು ಖಂಡನೆ ಮಾಡಿರುವರೆಂದು ಸರ್ಕಾರಿ ಪ್ರಕಟಣೆ ಹೊರಟಿದೆ

ಈಗವರೇ ಪ್ರಧಾನಿ

ಕರಾಚಿ ವಾರ್ತೆಯೊಂದು ಪಾಕ್ ಗವರ್ನರ್ ಜನರಲ್ ಕ್ವಾಜಾ ನಾಜಿಮುದ್ದೀನರವರು ಪ್ರಧಾನತ್ವವನ್ನು ತಾವೇ ಸ್ವೀಕರಿಸಿ, ವಿಕ್ಷಣಾ ಶಾಖೆಯನ್ನು ವಹಿಸಿಕೊಂಡಿದ್ದಾರೆ.

ರಾಜರ ರುಜು

ಈಜಿಪ್ಟಿನ ದೊರೆ ಫಾರೂಕ್ ಮೊನ್ನೆ ಸುಡಾನ್ ವೇಲಿನ ಸಹ ಆಡಳಿತನನ್ನು ರದ್ದು ಮಾಡುವ ಶಾಸನಕ್ಕೆ ರುಜು ಹಾಕಿದರೆಂದು ಕೈರೊ ವಾರ್ತೆ.

ಜಿನ್ನಾ ಪಕ್ಕದಲ್ಲಿ ಸಮಾಧಿ

ಲಿಯಾಕತ್ ಅಲಿಯವರ ಸಮಾಧಿ ಜಿನ್ನಾರವರ ಸಮಾಧಿ ನೆರೆಯಲ್ಲಿಯೇ ನೆರವೇರಿತೆಂದು ಕರಾಚಿ ವಾರ್ತೆ ತಿಳಿಸಿತ್ತದೆ ನಿನ್ನೆ ಅವರ ಶವದ ಮೆರವಣಿಗೆ ಸರ್ವ ಸಂರ್ಭಾದಿಗಳೊಡನೆ ಜರುಗಿತು.

ಆಫ್ಘ್ಕ ಹತ್ಯೆಕಾರ

ಪಾಕ್ ರೇಡಿಯೋ ನಿನ್ನೆ ಸುದ್ದಿ ಪ್ರಸಾರ ಮಾಡಿ ಪ್ರಧಾನಿಗಳನ್ನು ಕೊಲೆ ಮಾಡಿದವನು ಆಫ್ಘ್ಕ, ಆತನ ಬಳಿ 2 ಸಹಸ್ರ ರೂ ಗಳಿದ್ದವು ಎಂದಿದೆ.

ಸಾವೆಂದೂ ಒಪ್ಪುವದಿಲ್ಲ

ಕಾಶ್ಮೀರದ ಉಪಮುಖ್ಯ ಸಚಿವ ಭಕ್ಷಿ ಗುಲಾಂ ಅಹ್ಮದ್‌ರವರು ನಿನ್ನೆ ಜಮ್ಮುವಿನಲ್ಲಿ ಕೊಟ್ಟ ಹೇಳಿಕೆಯಲ್ಲಿ ಕಾಶ್ಮೀರಗೌರವಕ್ಕೆ ಚ್ಯುತಿ ಮಾಡುವ ಯಾವದೇ ಸಲಹೆಯನ್ನೂ ಅಂಗೀಕರಿಸುವದಿಲ್ಲವೆಂದು ನುಡಿದಿರುವರು.

ದಿವ್ಯವಾಣಿ

ಸ್ವಾರ್ಥನಿಷ್ಠೆಯಿಂದಲೇ ಜಗತ್ತು ಅಳಲ್ವಡುತ್ತಿದೆ — ಶೀಲರ್.

ಮೈಸೂರು ವರ್ತಾನ್ತ

ಮಹಿಳೆಯರಿಗೆ ಮಾತ್ರ ಪ್ರವೇಶ

ನಾಳೆ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆ ವರಿಗೆ ಮೈಸೂರು ದಸರಾ ವಸ್ತು ಪ್ರದರ್ಶನ ಮಹಿಳೆಯರಿಗೆ ಮಾತ್ರ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಪೋಲೀಸರಿಗೆ ಕೆಲಸ ಹೋಯಿತು

ಗುಂಟೂರು ತಾಲ್ಲೂಕಿನ ಹದಿನೇಳು ಮಂದಿ ಪೋಲೀಸರು ಟರ್ನ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮೇಲೆ ಧಾಳಿ ಮಾಡಿದರೆಂದು ನೌಕರಿಯಿಂದ ವಜಾ ಮಾಡಲ್ಪಟ್ಟಿದ್ದಾರೆ

ಆರ್ಥಿಕ ಮಂಡಳಿ ರಚನೆ

ಸಧ್ಯದಲ್ಲಿಯೇ ಮಾಜಿ ಸಚಿವ ಶ್ರೀ ಕೆ. ಸಿ ನಿಯೋಗಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಮಂಡಳದ ರಚನೆಯಾಗುವದೆಂದು ದೆಹಲಿ ವಾರ್ತೆ.

ನೆರವು ಯಾರನ್ನೂ ಕೇಳಿಲ್ಲ

ಪಂಚವಾರ್ಷಿಕ ಯೋಜನೆ ಕುರಿತು ಪಾರ್ಲಿಮೆಂಟಿನಲ್ಲಿ ತಿಳಿಸುತ್ತಾ, ಈ ಬಗ್ಗೆ ನಾವು ವಿದೇಶಿ ಸಹಾಯ ಕೇಳಿಲ್ಲ ಎಂದು ತಿಳಿಸಿರುವರು.

ಮಂತ್ರಿಗಳ ಅಪೀಲು

ಕೇಂದ್ರ ಚುನಾವಣಾ ಸಮಿತಿಗೆ ಕರ್ನಾಟಕ ಕಾಂಗ್ರೆಸ್ ಚುನಾವಣಾ ಪಟ್ಟಿ ವಿರುದ್ಧ ಅಪೀಲು ತುಂಬಾ ಹೋಗಿವೆ. ಈ ಪೈಕಿ ಕೇಂದ್ರ ಸಚಿವ ಶ್ರೀ ದಿವಾಕರ ಹಾಗೂ ಉಪಸಚಿವ ಶ್ರೀ ಕರುಂಕರ ಇವುಗಳೂ ಇವೆ

× ಭಾರತೀಯರನ್ನು ಒತ್ತಾಯದಿಂದ ಅವರ ದೇಶಕ್ಕೆ ಕಳಿಸುವದೇ ನಮ್ಮ ಪಕ್ಷದ ಧೋರಣೆವೆಂದು ನೆಟಾಲ್ ಶಾಖೆಯ ನ್ಯಾಶನಲಿಸ್ಟ್ ಪಕ್ಷದ ಅಧ್ಯಕ್ಷರು ದರ್ಬಾನಿನಲ್ಲಿ ತಿಳಿಸಿದ್ದಾರೆ

× ಜಪಾನ್ ಪಾರ್ಲಿಮೆಂಟಿನಲ್ಲಿ ಪ್ರಧಾನಿ ಯೋಷಿಡಾ ಹೇಳಿಕೆಯಿತ್ತು, ಜಪಾನನ್ನು ಕಮ್ಯುನಿಸ್ಟ್ ಪ್ರಚಾರ ಕೇಂದ್ರ ಮಾಡುವ ಸಂಭವವಿದೆಯಾದುದರಿಂದ, ರಷ್ಯ ಹಾಗೂ ಚೀನಾ ಪ್ರಜಾರಾಜ್ಯಗಳೊಡನೆ ಜಪಾನು ಸ್ವಯಂ ಸಂಬಂಧ ಮಾಡಿಕೊಳ್ಳಲು ಸುಲಭವಾಗವದಿಲ್ಲವೆಂದಿರುವರು

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಅಪೇರ—
ಅಮೋಘ 3 ನೇ ವಾರ
ಸರ್ವಾಧಿಕಾರಿ
ಮಹೋನ್ನತ ತಮಿಳು ಚಿತ್ರ
ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರಕ್, ಸಂಬಿಯಾಂ
ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 19-10-51 ರಿಂದ
ಸಿ ಐ ಡಿ ಗಾರ್ (ಹಿಂದಿ)

ರಣಜಿತ್
ಕೀರ್ತಿಯುತ 3 ನೇ ವಾರ
ಶಬಿಸ್ತಾನ್
ಮನಮೋಹನ ಹಿಂದಿ ಚಿತ್ರ
ಪಾತ್ರ: ಶ್ಯಾಂ, ನಸೀಂ, ಸಪ್ರು, ಕಕ್ಕು
ಪ್ರತಿ ದಿನ 3 ಆಟಗಳು

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಈಗ ಯಶಸ್ವಿಯಾಗಿ ನಡೆಯುತ್ತಿದೆ — ಪ್ರತಿ ದಿನ 3 ಆಟಗಳು
ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ
ಸುಖಸಂಪತ್ ಚಿತ್ರಪಥದವರ ಸುಂದರ ಸಾಂಸಾರಿಕ ಚಿತ್ರ
ತಿಲೋತ್ತಮೆ (ಕನ್ನಡ)
ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿಡೋ, ಕಲಾವಿಶಾರದ ಕೊಟ್ಟೂರಪ್ಪ
— SUKH SAMPATH CHITRAPAT Release

ಉಡ್‌ಲಾಂಡ್
ಜನಪ್ರಿಯ 2 ನೇ ವಾರ
ಪ್ರತಿ ಸಂಸಾರವೂ ನೋಡಲೇಬೇಕಾದ
ಅಮೋಘ ಸಾಂಸಾರಿಕ ಹಿಂದಿ ಚಿತ್ರ
ಶ್ರೀ ಗಣೇಶ ಜನ್ಮ
ರೂಪ ರಾಯ್, ತ್ರಿಲೋಕ್ ಕಪೂರ್
ಪ್ರತಿ ದಿನ 3 ಪ್ರದರ್ಶನಗಳು



Protect the Cow

Edited, Printed and Published by Dharma Prachara Niratha M. S. Krishna Rao, at the Satyavadi Press Chamrajpura Mysore